ಆರ್‌ಬಿಐ / 2005 –06 / 282
ಡಿಬಿಒಡಿ .ಬಿಪಿ .ಬಿಸಿ .ಸಂಖ್ಯೆ .56 / 21.01.001/2005–06

ಜನವರಿ 23,,2006

ಗೆ,
ಎಲ್ಲ ವಾಣಿಜ್ಯ ಬ್ಯಾಂಕುಗಳ
ಅಧ್ಯಕ್ಷರು / ಮುಖ್ಯಕಾರ್ಯನಿರ್ವಹಣಾಧಿಕಾರಿಗಳು
(ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಹೊರತುಪಡಿಸಿ)

ಮಾನ್ಯರೆ,

**<u>ಖಾತಾ ಸಂದಾಯ ಚೆಕ್ಕಿನ ಮೌಲ್ಯ ಸಂಗ್ರಹಣೆ – ಹುಟ್ಟುವಳಿಯನ್ನು ಮೂರನೆಯ ಪಕ್ಷಕಾರನ ಖಾತೆಗೆ ಜಮೆ ಮಾಡುವುದರ ಮೇಲೆ ನಿಷೇಧ</u>**

ಬ್ಯಾಂಕುಗಳಿಗೆ ತಿಳಿದಿರುವಂತೆ, ಖಾತೆಗೆ ಸ0ದಾಯವಾಗಬೇಕಾದ ಚೆಕ್ಕೊಂದನ್ನು ಪಾವತಿ ಪಡೆಯುವ ಗ್ರಾಹಕನಿಗಾಗಿ ಸಂಗ್ರಹಿಸಬೇಕಾಗುತ್ತದೆ. ಬ್ಯಾಂಕುಗಳ ಹೆಸರಿಗೆ ನೀಡಿದ ಖಾತೆಗೆ ಸಂದಾಯ ಚೆಕ್ಕುಗಳಿಗೆ ಸಂಬಂಧಿಸಿದಂತೆ ಇತರ ಬ್ಯಾಂಕುಗಳು ತಮ್ಮ ಹೆಸರಿಗೆ ನೀಡಿದ "ಖಾತೆಗೆ ಸಂದಾಯ" ಎಂದು ಗುರುತು ಮಾಡಿರುವ ಚೆಕ್ಕುಗಳನ್ನು, ಅವುಗಳಲ್ಲಿ ಪಾವತಿ ಪಡೆಯುವವರೆಂದು ಹೆಸರಿಸಿರದ ವ್ಯಕ್ತಿಗಳ ಖಾತೆಗಳಿಗೆ ಜಮೆ ಮಾಡುವಂಥ ಬ್ಯಾಂಕುಗಳು ಹಣ ಹಿ0ತೆಗೆಯುವವನ ಸರಿಯಾದ ಆದೇಶವಿಲ್ಲದೆ ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಹಾಗೆ ಮಾಡಬಹುದೆಂದು ಮತ್ತು ಅನಧಿಕೃತ ಸಂದಾಯಗಳಿಗೆ ಅವು ಹೊಣೆಯಾಗಿರುತ್ತವೆ ಎಂದು ನಮ್ಮ ಸುತ್ತೋಲೆ ಡಿಬಿಒಡಿ. ಸಂಖ್ಯೆ. ಬಿಸಿ. 23 / 21.01.001 / 92 ದಿನಾಂಕ ಸೆಪ್ಟಂಬರ್ 9,1992 ರಲ್ಲಿ ತಿಳಿಸಲಾಗಿದೆ.

2. ಇತ್ತೀಚೆಗೆ ಕೆಲವು ವ್ಯಕ್ತಿಗಳು / ಸಂಸ್ಥೆಗಳು ಪ್ರಾರಂಭಿಕ ಸಾರ್ವಜನಿಕ ನೀಡಿಕೆ(ಐಪಿಒ) ಸಂಸ್ಕರಣೆಯನ್ನು ದುರುಪಯೋಗಪಡಿಸಿಕೊಂಡ ಮತ್ತು ಸೆಬಿ(ಎಸ್.ಇ.ಬಿ.ಐ.)ಯಿಂದ ಈ ಬಗ್ಗೆ ಬಂದ ದೂರುಗಳ ದೃಷ್ಟಿಯಿಂದ ಭಾರತೀಯ ರಿಸರ್ವ್ ಬ್ಯಾಂಕು, ವ್ಯವಸ್ಥೆಯನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುವಲ್ಲಿ ಬೇರೆ ಬೇರೆ ವ್ಯಕ್ತಿಗಳು ಅಳವಡಿಸಿಕೊಂಡಿರುವ ವಿಧಾನವನ್ನು ಗೊತ್ತುಪಡಿಸಿಕೊಳ್ಳಲು ಕೆಲವು ಬ್ಯಾಂಕುಗಳಲ್ಲಿ ಸವಿವರವಾದ ತನಿಖೆಯನ್ನು ಕೈಗೊಂಡಿತು. ಮೇಲಿನ ಸೂಚನೆಗಳನ್ನು ನೀಡಲಾಗಿದ್ದರೂ ಬ್ಯಾಂಕುಗಳು ಡಿಮ್ಯಾಟ್ ಒದಗಿಸುವ ಪ್ರೋವೈಡರ್‌ಗಳ, ಸಹವರ್ತಿಗಳ ಕೋರಿಕೆಯ ಮೇರೆಗೆ ವ್ಯಕ್ತಿಗತ ಖಾತೆಗೆ ಜಮೆ ಮರುಪಾವತಿ ಆದೇಶಗಳ ಹುಟ್ಟುವಳಿಗಳನ್ನು, ವ್ಯಕ್ತಿಗತ ಖಾತೆಗಳಿಗೆ ಜಮೆ ಮಾಡುವ ಬದಲು ಬ್ರೋಕರುಗಳ ಖಾತೆಗಳಿಗೆ ಜಮೆ ಮಾಡಿರುವುದು ನಮ್ಮ ಗಮನಕ್ಕೆ ಬಂದಿದೆ. ಇದರಿಂದ ಸಂದಾಯ ವ್ಯವಸ್ಥೆಯನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡಂತಾಗಿದೆ ಮತ್ತು ಅಕ್ರಮಗಳನ್ನು ಎಸಗುವುದಕ್ಕೆ ಅನುಕೂಲ ಕಲ್ಪಿಸಿದಂತಾಗಿದೆ. ಬ್ಯಾಂಕುಗಳ ಖಾತೆಗೆ ಜಮೆ ಚೆಕ್ಕುಗಳ ಸಂಗ್ರಹಣೆಯ ಕಾರ್ಯವಿಧಾನ ಮಾರ್ಗಬದಲಾವಣೆ(ಡೀವಿಯೇಟ್) ಮಾಡಿರದಿದ್ದರೆ ಈ ದುಷ್ಕೃತ್ಯ ಸಂಭವಿಸುತ್ತಿರಲಿಲ್ಲ. ಈ ಕಾರ್ಯವಿಧಾನ ಮಾರ್ಗಬದಲಾವಣೆ ಗಳು ಬ್ಯಾಂಕುಗಳನ್ನು ವಿವಿಧ ಅಪಾಯಗಳಿಗೆ ಸಿಲುಕಿಸುವ ಸಾಮರ್ಥ್ಯ ಹೊಂದಿರುವುದರಿಂದ ಇವುಗಳನ್ನು ವಿವೇಕಯುತವಾದ ಮಾರುಕಟ್ಟೆ ಪದ್ಧತಿಯಾಗಿ ಸ್ವೀಕರಿಸತಕ್ಕದ್ದಲ್ಲ.

3. ಕಾನೂನು ಅಗತ್ಯತೆಗಳೊಂದಿಗೆ ಹೊಂದಾಣಿಕೆ ಇರಬೇಕಾದುದನ್ನು ಮತ್ತು ವಿಶೇಷವಾಗಿ ವರ್ಗಾಯಿಸಬಹುದಾದ ಸುಲೇಖಗಳ ಅಧಿನಿಯಮದ ಆಶಯವನ್ನು ಮನಗಂಡು ಮತ್ತು ಅನಧಿಕೃತ ಸಂಗ್ರಹಣೆಗಳಿಂದ ಉದ್ಭವಿಸುತ್ತಿರುವ ಹೊಣೆಗಾರಿಕೆಗಳಿಂದ ಬ್ಯಾಂಕುಗಳು ಹೊರೆಗೆ ಗುರಿಯಾಗುವುದನ್ನು ತಪ್ಪಿಸಿ ಅವುಗಳನ್ನು ರಕ್ಷಿಸುವ ದೃಷ್ಟಿಯಿಂದ ಮತ್ತು ಸಂದಾಯ ಮತ್ತು ಬ್ಯಾಂಕಿಂಗ್ ವ್ಯವಹರಣೆಯ ಸಮಗ್ರತೆ ಮತ್ತು ಸದೃಢತೆಯ ದೃಷ್ಟಿಯಿಂದ ಮತ್ತು ಇತ್ತೀಚಿನ ದಿನಗಳಲ್ಲಿ ಗಮನಕ್ಕೆ ಬಂದಿರುವ ಕಾರ್ಯವಿಧಾನ ಮಾರ್ಗಬದಲಾವಣೆಗಳು ಆಗಾಗ ಸಂಭವಿಸುವುದನ್ನು ತಡೆಗಟ್ಟುವ ದೃಷ್ಟಿಯಿಂದ ಬ್ಯಾಂಕುಗಳು ಖಾತೆಗೆ ಸಂದಯ ಚೆಕ್ಕನ್ನು ಅದರಲ್ಲಿ ಹೆಸರಿಸಿರುವ ಪಾವತಿ ಪಡೆಯುವವನಲ್ಲದ ಯಾರೇ ಇತರ ವ್ಯಕ್ತಿಯ ಖಾತೆಗೆ ಜಮೆ ಮಾಡುವುದನ್ನು ನಿಷೇದಿಸುವುದು ಅಗತ್ಯ ಎಂದು ರಿಸರ್ವ್ ಬ್ಯಾಂಕು ಪರಿಗಣಿಸಿದೆ.

4. ಚೆಕ್ ಬರೆದವನು / ಪಾವತಿ ಪಡೆಯುವವನು ಸಂಗ್ರಹಣೆಯ ಹುಟ್ಟುವಳಿಯನ್ನು ಪಾವತಿ ಪಡೆಯುವವನದಲ್ಲದ ಇತರೆ ಯಾವುದೇ ಖಾತೆಗೆ ಜಮೆ ಮಾಡುವಂತೆ ಬ್ಯಾಂಕಿಗೆ ಸೂಚಿಸಿರುವಲ್ಲಿ, ಆ ಸೂಚನೆಯು 'ಖಾತಾಸಂದಾಯ'

ಚೆಕ್‌ನ ಉದ್ದೇಶಿತ ಅಂತರ್ಗತ ಗುಣಕ್ಕೆ ವ್ಯತಿರಿಕ್ತವಾದುದರಿಂದ ಬ್ಯಾಂಕು ಚೆಕ್ ಬರೆದವನು ಆ ಚೆಕ್ಕನ್ನು ಅಥವಾ ಅದರ ಮೇಲಿರುವ 'ಖಾತಾಸಂದಾಯ' ಆದೇಶವನ್ನು ಹಿಂದಕ್ಕೆ ಪಡೆಯುವಂತೆ ಚೆಕ್ ಬರೆದವನಿಗೆ / ಪಾವತಿ ಪಡೆಯುವವನಿಗೆ ಕೇಳತಕ್ಕದ್ದು. ಈ ಸೂಚನೆಯು ಒಂದು ಬ್ಯಾಂಕು ನೀಡಿದ ಮತ್ತೊಂದು ಬ್ಯಾಂಕಿಗೆ ಸಂದಾಯ ಮಾಡಬೇಕಾದ ಚೆಕ್ ನ ಸಂಬಂಧದಲ್ಲಿ ಸಹ ಅನ್ವಯಿಸುತ್ತದೆ. ಬ್ಯಾಂಕಿನ ಸುತ್ತೋಲೆ ಡಿಬಿಓಡಿ ಸಂಖ್ಯೆ .ಬಿಸಿ. 23 / 21.01.001 / 92 ದಿನಾಂಕ ಸೆಪ್ಟಂಬರ್ 9, 1992 ರಲ್ಲಿ ಒಳಗೊಂಡಿರುವ ಸೂಚನೆಗಳು ಆ ಮಟ್ಟಿಗೆ ಮಾರ್ಪಾಡುಗೊಳ್ಳುತ್ತವೆ.

5. ಈ ನಿರ್ದೇಶನಗಳನ್ನು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 ರ 35ಎ ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ನೀಡಲಾಗಿದೆ.

**ತಮ್ಮ ವಿಶ್ವಾಸಿ,**
**( ಆನಂದ ಸಿನ್ಹಾ)**
**ಕಾರ್ಯಕಾರಿ ನಿರ್ದೇಶಕರು**